ಕರ್ನಾಟಕ ವಿಧಾನ ಸಭೆ

ಮಂಗಳವಾರ 15ನೇ ಜುಲೈ 2003 ರಂದು

ಸದನವು ವಿಧಾನಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ

ಬೆಳಿಗ್ಗೆ 11-00 ಗಂಟೆಗೆ ಸಮಾವೇಶಗೊಂಡಿತು

ಅಧ್ಯಕ್ಷರು (ಶ್ರೀ ಎಂ.ವಿ. ವೆಂಕಟಪ್ಪ) ನವರು

ಪೀಠವನ್ನು ಅಲಂಕರಿಸಿದ್ದರು

ಶ್ರೀ ಬಿ. ಸೋಮಶೇಖರ್ : ಮಾನ್ಯ ಅಧ್ಯಕ್ಷರೆ, ನಾನೊಂದು ಪ್ರಿವಿಲೇಜ್ ಮೊಷನ್ ಒಂದು ನೋಟೀಸ್‌ನ್ನು ನಿಮಗೆ ಕೊಟ್ಟಿದ್ದೇನೆ.

ಅಧ್ಯಕ್ಷರು : ಯಾವಾಗ. I have not received so far.

ಶ್ರೀ ಬಿ. ಸೋಮಶೇಖರ್ : ಮಾನ್ಯ ಅಧ್ಯಕ್ಷರೆ, ಇವಾಗ ನಾನು ಸೆಕ್ರೆಟರಿಯವರ ಕಡೆ ಕೊಟ್ಟಿರುತ್ತೇನೆ.

ಅಧ್ಯಕ್ಷರು : ಅದು ನನಗೆ ಇನ್ನೂ ಬಂದಿಲ್ಲ.

ಶ್ರೀ ಬಿ. ಸೋಮಶೇಖರ್ : ಇವಾಗ ಕಳುಹಿಸಿಕೊಟ್ಟಿದ್ದೇನೆ.

Mr. Speaker : I have not received so far. ಮೊದಲು ಪ್ರಶ್ನೋತ್ತರ ವೇಳೆ.

ಶ್ರೀ ಬಿ. ಸೋಮಶೇಖರ್ : ಮಾನ್ಯ ಅಧ್ಯಕ್ಷರೆ, ಅದಾದ ಮೇಲೆ ನನಗೆ ಪ್ರಸ್ತಾಪ ಮಾಡುವುದಕ್ಕೆ ಒಂದು ಅವಕಾಶವನ್ನು ಮಾಡಿಕೊಡಿ.

ಅಧ್ಯಕ್ಷರು : ದಯವಿಟ್ಟು ಇಲ್ಲಿ ನೋಡಿ, ಪ್ರಶ್ನೋತ್ತರ ವೇಳೆಗೆ ಮುಂಚೆಯೇ ಪ್ರಸ್ತಾಪಿಸುವುದು ವಾಡಿಕೆಯಾಗಿ ಬಿಟ್ಟಿದೆ. ದಯವಿಟ್ಟು ಕ್ಷಮಿಸಬೇಕು. ಪ್ರಶ್ನೋತ್ತರ ಮೊದಲು ಮುಗಿಯಲಿ ಆ ಮೇಲೆ ನೀವು ಏನಾದರೂ ಪ್ರಸ್ತಾಪ ಮಾಡಿ I have no objection.

1. ಪ್ರಶ್ನೋತ್ತರಗಳು

ಅ) ಸದನದಲ್ಲಿ ಉತ್ತರಿಸಲಾದ ಪ್ರಶ್ನೆಗಳು

ಕೊರಟಗೆರೆ ತಾಲ್ಲೂಕಿನ ಹಳ್ಳಿಗಳಿಗೆ ಬಸ್ ಸೌಲಭ್ಯ ಕಲ್ಪಿಸುವ ಬಗ್ಗೆ

357 (3350) ಶ್ರೀ ಚನ್ನಿಗಪ್ಪ ಸಿ. (ಕೊರಟಗೆರೆ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ತುಮಕೂರು ಜಿಲ್ಲೆ ಕೊರಟಗೆರೆ ತಾಲ್ಲೂಕಿನ ಅನೇಕ ಹಳ್ಳಿಗಳಿಗೆ ಬಸ್ಸಿನ ಸೌಕರ್ಯ ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಡಿಪೋ ಇದ್ದರೂ ಸಹ ಸರಿಯಾಗಿ ಬಸ್ಸುಗಳನ್ನು ಒದಗಿಸದಿರಲು ಕಾರಣವೇನು;

ಇ) ತಾಲ್ಲೂಕಿನ ಎಷ್ಟು ಹಳ್ಳಿಗಳಿಗೆ ಸಾರಿಗೆ ಸಂಪರ್ಕ ಕಲ್ಪಿಸಲು ಸರ್ವೆ ಮಾಡಲಾಗಿದೆ;

ಈ) ಈಗಾಗಲೇ ಜನಸಾಮಾನ್ಯರ ಅರ್ಜಿಗಳಿಗೆ ಸರ್ಕಾರವು ಕ್ರಮ ಕೈಗೊಳ್ಳದಿರಲು ಕಾರಣವೇನು?

ಶ್ರೀ ಬಿ. ರಮಾನಾಥ ರೈ (ಸಾರಿಗೆ ಸಚಿವರು) :

ಅ) ಇಲ್ಲ

ಆ) ಈ ತಾಲ್ಲೂಕು ಸಂಪೂರ್ಣ ರಾಷ್ಟ್ರೀಕೃತವಲ್ಲದ ವಲಯದಲ್ಲಿದ್ದು, ಖಾಸಗಿ ಪ್ರವರ್ತಕರಿಂದ ಸಾರಿಗೆ ಸೌಲಭ್ಯವನ್ನು ಒದಗಿಸಿರುತ್ತದೆ. ಆದರೂ ಸಹ ಈ ತಾಲ್ಲೂಕಿನ 230 ಹಳ್ಳಿಗಳ ಪೈಕಿ 52

ಹಳ್ಳಿಗಳಿಗೆ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯಿಂದ ಅಂತರ ರಾಜ್ಯ ಒಪ್ಪಂದದ ಮೇರೆಗೆ ಸಾರಿಗೆ ಸೌಲಭ್ಯ ಒದಗಿಸಲಾಗುತ್ತಿದೆ.

ಇ) ಇತ್ತೀಚೆಗೆ ಮಾನ್ಯ ಶಾಸಕರು, ಕೊರಟಗೆರೆ ಇವರ ಸಲಹೆಯ ಮೇರೆಗೆ ಕೊರಟಗೆರೆ–ತುಮಕೂರು ಮಾರ್ಗ ಗೊರವನಹಳ್ಳಿ, ತೀರ್ಥ, ಮಾವತೂರು, ಪಾತಗಾನಹಳ್ಳಿ, ವಜ್ಜನಕುರ್ಕೆ, ಐ.ಕೆ. ಕಾಲೋನಿ, ಅಸುಪನಹಳ್ಳಿ, ದುರ್ಗದಹಳ್ಳಿ, ನಾಮದ ಚಿಲುಮೆ ಹಾಗೂ ಬೆಳಗುಂಬ ನಡುವೆ ಅನುಸೂಚಿ ಸಂಖ್ಯೆ: 109ರಲ್ಲಿ ದಿನಾಂಕ: 16–3–0300ರಂದ ಸಂಪರ್ಕವನ್ನು ಕಲ್ಪಿಸಲಾಗಿದೆ. ಬೇರೆ ಯಾವುದೇ ಮಾರ್ಗದಲ್ಲಿ ಸರ್ವೆ ಮಾಡಿರುವುದಿಲ್ಲ.

ಈ) ಉತ್ತರ (ಆ) ದರಲ್ಲಿನ ಮೇರೆಗೆ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಶ್ರೀ ಸಿ. ಚನ್ನಿಗಪ್ಪ : ಮಾನ್ಯ ಅಧ್ಯಕ್ಷರೆ, ರಾಜ್ಯದಲ್ಲಿ ಇವತ್ತು ಕೆಎಸ್ಆರ್‌ಟಿಸಿಯಿಂದ ಹೊಸ ಬಸ್ಸುಗಳನ್ನು ಹಳ್ಳಿಗಾಡಿಗೆ ಹಾಕಿ ಕೊಡುತ್ತಿದ್ದೇವೆ, ಸರ್ಕಾರ ಇದರ ಬಗ್ಗೆ ಆದೇಶವನ್ನು ಮಾಡಿದೆ. ಸುಮಾರು 6 ತಿಂಗಳಿನಿಂದ ನಾನು ಕಾಗದಗಳನ್ನು ಮಾನ್ಯ ಸಚಿವರಿಗೆ ಹಾಗೂ ಮಾನ್ಯ ಅಧ್ಯಕ್ಷರಿಗೆ ಕೊಟ್ಟಿದ್ದೇನೆ. ನಮ್ಮ ತಾಲ್ಲೂಕಿನಲ್ಲಿ ಉತ್ತಮವಾದ ರಸ್ತೆ ಇದ್ದರೂ ಕೂಡ 20–30 ಕಿ.ಮೀ ವರೆಗೆ ಯಾವ ಉತ್ತಮವಾದ ಬಸ್ಸುಗಳೂ ಇಲ್ಲ. ದಯಮಾಡಿ ಸರ್ಕಾರ ಹಳ್ಳಿಗಳಿಗೆ ಏನಾದರೂ ಬಸ್ಸುಗಳ ಸೌಕರ್ಯವನ್ನು ಕೊಡುವುದಕ್ಕೆ ಆಲೋಚನೆ ಮಾಡಿದೆಯಾ? ಇವತ್ತು ಕೆಎಸ್ಆರ್‌ಟಿಸಿ ಬಸ್ಸಿನ ವ್ಯವಸ್ಥೆ ಅತ್ಯುತ್ತಮವಾಗಿದೆ. ಈ ಒಂದು ಸಂಸ್ಥೆಯ ಅಧ್ಯಕ್ಷರಾದ ಮಾನ್ಯ ದೇವರಾಜ್‌ರವರಿಗೆ ನಾವು ಕಾಗದವನ್ನು ಕೊಟ್ಟಾಗ ಉತ್ತಮವಾದ ಬಸ್ಸುಗಳನ್ನು ಕೊಡುತ್ತೇವೆ ಎನ್ನುವ ಮಾತನ್ನು ಹೇಳಿದ್ದಾರೆ. ನಿಲುಗಡೆ ವ್ಯವಸ್ಥೆ ಕೂಡ ಬಹಳ ಚೆನ್ನಾಗಿದೆ. ಆದರೆ ಬಸ್ಸುಗಳ ಸಂಖ್ಯೆ ಭಾರೀ ಕಡಿಮೆ ಇದೆ. ಸರ್ಕಾರ ಏನಾದರೂ ಬಸ್ಸುಗಳ ಸಂಖ್ಯೆಯನ್ನು ಜಾಸ್ತಿ ಮಾಡಿ ಹಳ್ಳಿಗಾಡಿನ ರೈತರಿಗೆ ಮತ್ತು ವ್ಯವಸಾಯವನ್ನು ಮಾಡಿಕೊಂಡು ಜೀವನವನ್ನು ಮಾಡಿಕೊಂಡಿರುವಂಥವರಿಗೆ, ಅವರ ಹಣ್ಣು ಮತ್ತು ತರಕಾರಿಯನ್ನು ಸಾಗಾಣಿಕೆ ಮಾಡುವುದಕ್ಕೆ ಅನುಕೂಲ ಮಾಡಿಕೊಡುವುದರ ಬಗ್ಗೆ ಮಾನ್ಯ ಸಚಿವರು ತಿಳಿಸಬೇಕೆಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

ಶ್ರೀ ಬಿ. ರಮಾನಾಥ ರೈ : ಮಾನ್ಯ ಅಧ್ಯಕ್ಷರೆ, ತುಮಕೂರು ಜಿಲ್ಲೆ ಸಂಪೂರ್ಣ ರಾಷ್ಟ್ರೀಕರಣವಲ್ಲದ ವಲಯ, ಹಾಗೂ ಕೆಲವು ಸಂಪೂರ್ಣ ರಾಷ್ಟ್ರೀಕೃತ ವಲಯ ಇದೆ. ಕೆಲವು ಭಾಗಶಃ ರಾಷ್ಟ್ರೀಕೃತ ವಲಯ, ಕೆಲವು ಸಂಪೂರ್ಣ ರಾಷ್ಟ್ರೀಕೃತವಲ್ಲದ ವಲಯವಾಗಿದೆ. ಬೆಂಗಳೂರಿನಿಂದ ತುಮಕೂರಿನವರೆಗೆ ಹೋಗುವ ರಸ್ತೆ ಮಾತ್ರ ರಾಷ್ಟ್ರೀಕರಣ ವಲಯಕ್ಕೆ ಸೇರಿಕೊಳ್ಳುತ್ತದೆ. ಉಳಿದೆಲ್ಲವೂ ರಾಷ್ಟ್ರೀಕರಣವಲ್ಲದ ವಲಯ. ಆದ್ದರಿಂದ ನಾವು ಒಂದು ಅವಕಾಶವನ್ನು ಆದ್ಯತೆಯ ಮೇರೆಗೆ ಪರಿಗಣಿಸಿ ಕೆಲವು ಅಗತ್ಯ ಜಾಗಕ್ಕೆ ಬಸ್ಸುಗಳನ್ನು ಹಾಕತಕ್ಕಂಥ ವ್ಯವಸ್ಥೆಯನ್ನು ಸಾರಿಗೆ ಸಂಸ್ಥೆ ಮಾಡುತ್ತದೆ. ಜನರ ಅನುಕೂಲಕ್ಕಾಗಿ ನಾವು ಖಾಸಗಿ ಬಸ್ಸುಗಳಿಗೆ ಪರವಾನಗಿಯನ್ನು ಕೊಡತಕ್ಕಂಥ ವ್ಯವಸ್ಥೆಯನ್ನು ಮಾಡುತ್ತೇವೆ.

ಶ್ರೀ ಸಿ. ಚನ್ನಿಗಪ್ಪ : ಮಾನ್ಯ ಅಧ್ಯಕ್ಷರೆ, ಕಳೆದ ಏಪ್ರಿಲ್ ತಿಂಗಳಲ್ಲಿ ನಮ್ಮ ತಾಲ್ಲೂಕಿನ ಮಾವತೂರು ಎಂಬ ಹಳ್ಳಿಗೆ ಪ್ರೈವೇಟ್‌ನವರು ಸುಮಾರು 19 ಬಸ್ಸುಗಳನ್ನು ಆ ರೂಟಿನಲ್ಲಿ ಓಡಾಡಿಸುತ್ತಿದ್ದಾರೆ. ಅಲ್ಲಿ ಒಂದು ಲಕ್ಷ್ಮೀದೇವಸ್ಥಾನ ಗುಡಿ ಇದೆ. ಅಲ್ಲಿಗೆ ಹೋಗುವುದಕ್ಕೆ 15–20 ರೂ.ಗಳವರೆಗೆ ಕೊಡಿ ಎಂದು ಮನಬಂದಂತೆ ಚಾರ್ಜ್ ಕೇಳುವುದಕ್ಕೆ ವ್ಯವಸ್ಥೆಯನ್ನು ಮಾಡಿದ್ದಾರೆ.

ಅಲ್ಲಿ ಗಲಾಟೆಯಾದಾಗ 4 ದಿವಸ ಪೊಲೀಸ್‌ನವರಿಗೆ ಕಂಪ್ಲೈಂಟ್ ಕೊಟ್ಟು ಅವರನ್ನು ಕರೆಸಿ ಹೊಡೆಸಿ ರೈತರ ಮೇಲೆ ಕೇಸನ್ನು ರಿಜಿಸ್ಟರ್ ಮಾಡಿದ್ದಾರೆ. ನಾನು ಕೆಎಸ್‌ಆರ್‌ಟಿಸಿ ಅಧ್ಯಕ್ಷರಾದ ಶ್ರೀ ದೇವರಾಜ್‌ರವರಿಗೆ ಲೆಟರನ್ನು ಕೊಟ್ಟು ಕೇಳಿದಾಗ ಅವರು ನಮಗೆ 24 ಗಂಟೆಗಳೊಳಗಾಗಿ 4 ಬಸ್ಸನ್ನು ಹಾಕಿಕೊಟ್ಟರು. ಆ ಬಸ್ಸುಗಳು ಈಗ ಓಡುತ್ತಿವೆ, ಅದೇ ರೀತಿಯಾಗಿ ನಮ್ಮ ತಾಲ್ಲೂಕಿನ ಎಲ್ಲಾ ಮಾರ್ಗಗಳು ಟಾರು ರಸ್ತೆ ಅತ್ಯುತ್ತಮವಾಗಿ ನಮ್ಮ ತಾಲ್ಲೂಕಿನಲ್ಲಿ ಆಗಿದೆ. ಇವತ್ತಿನ ದಿವಸ ಮಾನ್ಯ ಮುಖ್ಯಮಂತ್ರಿಗಳು ರೈತ ಸಾರಿಗೆ ಎಂದು ಏನು ಮಾಡಿದ್ದಾರೆ, ದಯಮಾಡಿ ರೈತ ಸಾರಿಗೆಯನ್ನು ಹಳ್ಳಿಗಾಡಿಗೆ ಒದಗಿಸುವುದಕ್ಕೆ ಏನು ಪ್ರಯತ್ನವನ್ನು ಮಾಡಿದ್ದಾರೆ ಅದನ್ನು ನಾನು ಸ್ವಾಗತ ಮಾಡುತ್ತೇನೆ. ಎಷ್ಟು ದಿನಗಳಲ್ಲಿ ಸರ್ಕಾರದವರು ಆ ಬಸ್ಸುಗಳನ್ನು ಹಾಕುತ್ತೀರೆಂದು ದಯಮಾಡಿ ತಿಳಿಸಬೇಕೆಂದು ನಾನು ತಮ್ಮ ಮುಖಾಂತರ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಬಿ. ರಮಾನಾಥ್ ರೈ : ಇದರ ಬಗ್ಗೆ ನಾನು ಮೊದಲೇ ಉತ್ತರದಲ್ಲಿ ಹೇಳಿದ್ದೇನೆ. ಈಗಾಗಲೇ ಕೊರಟಗೆರೆ ತಾಲ್ಲೂಕಿನಲ್ಲಿ 230 ಹಳ್ಳಿಗಳ ಪೈಕಿ 52 ಹಳ್ಳಿಗಳಿಗೆ ರಸ್ತೆ ಸಾರಿಗೆ ಸಂಸ್ಥೆಯ ಬಸ್ಸು ಓಡುತ್ತಿವೆ. ಅದು ಸಂಪೂರ್ಣ ರಾಷ್ಟ್ರೀಕರಣವಲ್ಲದ ವಲಯ, ಅನೇಕ ಕಡೆ ಖಾಸಗಿ ಪ್ರವರ್ತಕರಿಂದ ಸಾರಿಗೆ ಸಂಪರ್ಕ ಕಲ್ಪಿಸಲಾಗುತ್ತಿದೆ. ಅನೇಕ ರಸ್ತೆಗಳಲ್ಲಿ ಇವತ್ತು ಖಾಸಗಿ ಪ್ರವರ್ತಕರಿಂದ ಸಾರಿಗೆ ಸಂಪರ್ಕ ಕಲ್ಪಿಸಲಾಗುತ್ತಿದೆ. ಅನೇಕ ರಸ್ತೆಗಳಲ್ಲಿ ಇವತ್ತು ಖಾಸಗಿ ಬಸ್ಸುಗಳು ಓಡುತ್ತಿವೆ. ಇನ್ನು ಬಸ್ಸುಗಳು ಬೇಕಾಗಿದ್ದರೆ ನಾವು ಪರ್ಮಿಟ್‌ಗಳನ್ನು ಕೊಡುತ್ತೇವೆ. ತಮ್ಮ ಕೆಲವು ಬೇಡಿಕೆಗಳನ್ನು ನಾವು ಸಲಹೆಯ ಮೇರೆಗೆ ತುಮಕೂರು–ಕೊರಟಗೆರೆಯ ನಡುವೆ ಬೆಳೆಗುಂಬಾ, ನಾಮಚಿಲುಮೆ, ಅನುಪನಹಳ್ಳಿ, ಕಾತನಕನಹಳ್ಳಿ, ಅಲ್ಲಿ ಅನುಕೂಲಕೋಸ್ಕರವಾಗಿ ಅನುಸೂಚಿಗಳನ್ನು ಈ ಸಾರಿಗೆ ಸಂಸ್ಥೆ ಪ್ರಾರಂಭಿಸಿ ಕಾರ್ಯಾಚರಣೆಯನ್ನು ಮಾಡಲಾಗುತ್ತಿದೆ. ತಮ್ಮ ಏನು ಸಲಹೆ ಇದೆ ಅದನ್ನು ಪರಿಶೀಲಿಸಿ ಸೂಕ್ತವಾದ ವ್ಯವಸ್ಥೆಯನ್ನು ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಅಧ್ಯಕ್ಷರು : ಶ್ರೀ ಶಂಕರಲಿಂಗೇಗೌಡರೆ, ತಮ್ಮ ಪ್ರಶ್ನೆಗೆ ಸರ್ಕಾರದವರು 15 ದಿವಸ ಟೈಮ್ ಬೇಕೆಂದು ಕೇಳಿದ್ದಾರೆ.

ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ : ಏನು ಸ್ವಾಮಿ ಇದು? ಇದು ಬೇಜವಾಬ್ದಾರಿಯ ಪರಮಾವಧಿ ಎಂದು ಹೇಳಿದರೆ ತಪ್ಪಾಗಲಾರದು.

ಅಧ್ಯಕ್ಷರು : ತಾವು ಒಳ್ಳೆಯ ಪದಗಳನ್ನು ಉಪಯೋಗಿಸಿ, ಬೇಜವಾಬ್ದಾರಿ ಎಂದು ಏತಕ್ಕೆ ಉಪಯೋಗಿಸುತ್ತೀರಿ? ಒಳ್ಳೆಯ ಪಾರ್ಲಿಮೆಂಟರಿ ಪದವನ್ನು ಉಪಯೋಗಿಸಿ, ನೀವು ಕನ್ನಡದಲ್ಲಿ ಪಂಡಿತರಾಗಿದ್ದೀರಿ, ಒಳ್ಳೆಯ ಪದಗಳನ್ನು ಉಪಯೋಗಿಸಿ.

ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ : ಅದು ಅನ್‌ಪಾರ್ಲಿಮೆಂಟರಿ ವರ್ಡ್ ಅಲ್ಲ "ಕನ್ನಡದ ಕಂಪು ಇಂಪಿನ ಪದ ಅದು"

ಶ್ರೀ ಡಿ.ಬಿ. ಚಂದ್ರೇಗೌಡ : ಮಾನ್ಯ ಸಭಾಧ್ಯಕ್ಷರೆ, ಜವಾಬ್ದಾರಿಯುತವಾಗಿ ವರ್ತನೆ ಮಾಡಬೇಕೆಂದು ತಾವು ಹೇಳಿದ್ದೀರಿ, ಜೊತೆಗೆ ಯಾವ ಪ್ರಶ್ನೆಯನ್ನು ಕೇಳಿದ್ದಾರೆ, ಅದರ ಕಲ್ಪನೆಯೂ ಕೂಡ ಅವರಿಗಿರಬೇಕು. ನಾವು ಹೈಕೋರ್ಟಿನಿಂದ ಇದಕ್ಕೆ ಬೇಕಾದಂತಹ ಮಾಹಿತಿಯನ್ನು ತರಿಸಿಕೊಳ್ಳಬೇಕಾಗುತ್ತದೆ. ಸರ್ಕಾರವೇ ನೇರವಾಗಿ ಇವರಿಗೆ ಉತ್ತರವನ್ನು ಕೊಡುವುದಕ್ಕಾಗುವುದಿಲ್ಲ. ಅದರಿಂದಾಗಿ ನಾವು ಸಮಯವನ್ನು ಕೇಳಿದ್ದೇವೆ ಅಷ್ಟೆ. ತಾಳ್ಮೆಯಿಂದ ಇದ್ದರೆ ಅನುಕೂಲವಾಗುತ್ತದೆ.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಸಭಾಧ್ಯಕ್ಷರೆ, ಹೈಕೋರ್ಟಿನಿಂದ ಮಾಹಿತಿಯನ್ನು ತರಿಸಿಕೊಳ್ಳಬೇಕೆಂದು ಹೇಳಿದ್ದಾರೆ. ಮೈಸೂರು ನಗರದಲ್ಲಿನ ನ್ಯಾಯಾಲಯ ಆವರಣದಲ್ಲಿರುವ

ಕಟ್ಟಡಗಳು ಎಷ್ಟು? ಯಾವಾಗ ಕಟ್ಟಿಸಲಾಗಿದೆ, ಇಂತಹ ಒಂದು ಮಾಹಿತಿಯೂ ಕೂಡ ಸರ್ಕಾರದಲ್ಲಿ ಇಲ್ಲವೆಂದರೆ ಹೇಗೇ?

ಶ್ರೀ ಡಿ.ಬಿ. ಚಂದ್ರೇಗೌಡ : ಸರ್ಕಾರದಲ್ಲಿ ಮಾಹಿತಿ ಇದೆ.

ಶ್ರೀ ಜಗದೀಶ್ ಶೆಟ್ಟರ್ : ಯಾವುದಾದರೂ ಎಷ್ಟು ಕೇಸು ಪೆಂಡಿಂಗ್ ಇದ್ದಾವೆ, ನಿಮ್ಮ ಸಿವಿಲ್ ಕೋರ್ಟಿನಲ್ಲಿ ಎಷ್ಟು ಕೇಸುಗಳು ಪೆಂಡಿಂಗ್ ಇವೆ, ಡಿಸ್ಟ್ರಿಕ್ಟ್ ಕೋರ್ಟಿನಲ್ಲಿ ಎಷ್ಟು ಕೇಸು ಪೆಂಡಿಂಗ್ ಇವೆ, ಎಷ್ಟು ಕೇಸುಗಳು ಡಿಸ್‌ಪೋಸಲ್ ಆಗಿವೆ.....

ಅಧ್ಯಕ್ಷರು : ಅವರು ಮಾಹಿತಿಯನ್ನು ತರಿಸುತ್ತಾರೆ ಬಿಡಿ.

ಶ್ರೀ ಜಗದೀಶ್ ಶೆಟ್ಟರ್ : ಇವೆಲ್ಲಾ ಮಾಹಿತಿ ಹೈಕೋರ್ಟಿನದ್ದು, ಇದನ್ನು ಪಿಡಬ್ಲ್ಯೂಡಿಯವರು ಕನ್‌ಸ್ಟ್ರಕ್ಷನ್ಸ್ ಮಾಡಿರುವುದು, ಈ ಎಲ್ಲಾ ಮಾಹಿತಿಯನ್ನು ಪಿಡಬ್ಲ್ಯೂಡಿ ಇಲಾಖೆಯಿಂದ ತರಿಸಬಹುದು. ಇಂತಹ ಸಣ್ಣಸಣ್ಣ ವಿಷಯಕ್ಕೂ ಕೂಡ ಈ ರೀತಿಯಾಗಿ ತನ್ನ ಅಸಹಾಯಕತೆಯನ್ನು ಪ್ರದರ್ಶನ ಮಾಡುತ್ತದೆ ಎಂದರೆ ಈ ಹೈಟೆಕ್ ಸರ್ಕಾರ, ಈ ಗೌರ್ನನೆನ್ಸ್ ಇದಕ್ಕೆ ಏನು ಅರ್ಥವಿದೆ ಎಂಬುದು ನನಗೆ ಅರ್ಥವಾಗುತ್ತಿಲ್ಲ. ಪ್ರತಿ ಸಾರಿಯೂ ಇದೇ ಆಗುತ್ತಿದೆ, ಒಂದು ಸಣ್ಣ ಮಾಹಿತಿಯನ್ನು ಸರ್ಕಾರಕ್ಕೆ ಕೊಡುವುದಕ್ಕಾಗುವುದಿಲ್ಲವೆಂದರೆ ಇನ್ನೂ ನಾವು ಏತಕ್ಕಾಗಿ ಕೊಶ್ಚನ್ ಕೇಳಬೇಕು? ಯಾವಾಗಲೋ ಒಂದು ಸ್ಟಾರ್ಡ್ ಕೊಶ್ಚನ್ ಬಂದಿರುತ್ತದೆ, ಇಂತಹ ಸಂದರ್ಭದಲ್ಲಿಯೂ ಕೂಡ ಇವರು ಆನ್ಸರ್ ಕೊಡುವುದಿಲ್ಲ. ನಾವು 15 ದಿವಸಗಳ ಮುಂಚೆಯೇ ಕೊಶ್ಚನ್ ಕೇಳಿರುತ್ತೇವೆ.

ಅಧ್ಯಕ್ಷರು : ಈ ಸೆಷನ್‌ನಲ್ಲಿ ಆಗಿರುವುದಿಲ್ಲ.

ಶ್ರೀ ಜಗದೀಶ್ ಶೆಟ್ಟರ್ : ಪ್ರತಿ ಸಲವು ಇದೇ ರೀತಿಯಾಗುತ್ತದೆ. ಇದು ಹೀಗೆಯೇ ನಾಲ್ಕು ವರ್ಷಗಳಿಂದ ನಡೆದುಕೊಂಡು ಬಂದಿರುತ್ತದೆ.

ಅಧ್ಯಕ್ಷರು : ಅವರು ಎರಡು ವಾರಗಳ ಕಾಲ ಟೈಮ್ ಕೇಳಿದ್ದಾರೆ.

ಶ್ರೀ ಜಗದೀಶ್ ಶೆಟ್ಟರ್ : ಎಷ್ಟೋ ಸದನಗಳಲ್ಲಿ ಕೇಳಿರುವಂತಹ ಪ್ರಶ್ನೆಗಳಿಗೆ ಇವತ್ತಿಗೂ ಕೂಡ ಆನ್ಸರ್ ಬಂದಿರುವುದಿಲ್ಲ.

ಅಧ್ಯಕ್ಷರು : ಅವರು ಎರಡು ವಾರಗಳ ಕಾಲ ಟೈಮ್ ಕೇಳಿದ್ದಾರೆ.

ಶ್ರೀ ಜಗದೀಶ್ ಶೆಟ್ಟರ್ : ಎರಡು ವಾರಗಳ ಟೈಮ್ ಏತಕ್ಕಾಗಿ ಬೇಕು? ಅಷ್ಟು ಹೊತ್ತಿಗೆ ಸದನವು ಮುಗಿದುಹೋಗುತ್ತದೆ. ಸದನ ನಡೆಯುವುದೇ 23 ದಿವಸಗಳು.

ಶ್ರೀ ಡಿ.ಬಿ. ಚಂದ್ರೇಗೌಡ : ಮೈಸೂರು ನಗರ ಇಂದು ಮತ್ತು ನಿನ್ನೆಯದಲ್ಲ. ಶತಶತಮಾನಗಳ ಕಾಲ ಅದು ಇರತಕ್ಕಂತಹ ನಗರವಾಗಿದೆ. ಅಲ್ಲಿ ಅದು ಇವತ್ತು ಪ್ರಾರಂಭವಾದ ಕೋರ್ಟುಗಳಲ್ಲ. ಇವರು ವಿವರಗಳನ್ನು ಲೇಟೆಸ್ಟ್ ಆಗಿ ಕೇಳಿದರೆ ಕೊಡಬಹುದು, ಇದು ಹುಟ್ಟಿದಾಗಿನಿಂದ ಎಷ್ಟು ಕೋರ್ಟುಗಳಾಗಿತ್ತು? ಆ ಕಟ್ಟಡಕ್ಕೆ ವಯಸ್ಸೆಷ್ಟು? ಅದಕ್ಕೆ ಖರ್ಚಾದ ಹಣವೆಷ್ಟು? ಈ ಎಲ್ಲಾ ಮಾಹಿತಿಗಳು ಶಾಸನಸಭೆಯಲ್ಲಿ ಬೇಕಾಬಿಟ್ಟಿ ಹೇಳುವುದಕ್ಕಾಗುವುದಿಲ್ಲ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್ : ಸರ್ಕಾರಕ್ಕೆ ಇಚ್ಛಾಶಕ್ತಿ ಇದ್ದರೆ ಎಲ್ಲಾ ಮಾಹಿತಿಗಳು ಸಿಗುತ್ತಿತ್ತು. ಸರ್ಕಾರಕ್ಕೆ ಇಚ್ಛಾಶಕ್ತಿಯೇ ಇಲ್ಲ. ಅಧಿಕಾರಿಗಳಿಗೆ ಇವರು ಕಟ್ಟುನಿಟ್ಟಿನ ಸೂಚನೆಯನ್ನು ಕೊಡಬೇಕು. ಅವರು ಮಾಹಿತಿಯನ್ನು ಕೊಟ್ಟೇ ಕೊಡುತ್ತಾರೆ. ಆ ಕಮಿಟ್‌ಮೆಂಟ್ ನಿಮಗೆ ಇಲ್ಲ.

ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ : ಕೋರ್ಟುಗಳಲ್ಲಿ ಕೇಸುಗಳನ್ನು ಹತ್ತಾರು ವರ್ಷಗಳ ಕಾಲ ತಳ್ಳುವುದಿಲ್ವಾ?

ಅಧ್ಯಕ್ಷರು : ಶಂಕರಲಿಂಗೇಗೌಡರೆ, ಮಾಹಿತಿಯನ್ನು ತರಿಸೋಣ ಬಿಡಿ. ಚೆನ್ನಿಗಪ್ಪನವರೇ, ತಾವು ಸುಮ್ಮನಿರಿ. ನೆಕ್ಸ್ಟ್ ಕೊಶ್ಚನ್ ಮಿಸ್ಟರ್ ಖಾದ್ರಿಯವರು.

ಶ್ರೀ ಸಿ. ಚೆನ್ನಿಗಪ್ಪ : ಇದರ ಬಗ್ಗೆ ನಾನು ಸರ್ಕಾರವನ್ನು ವಿನಂತಿಮಾಡುತ್ತೇನೆ. ಎಲ್ಲಾ ತಾಲ್ಲೂಕುಗಳಿಗೂ ಕೋರ್ಟು ಬಿಲ್ಡಿಂಗ್ ಆಗಬೇಕು.

ಶ್ರೀ ಕೆ.ಎಂ. ಕೃಷ್ಣಮೂರ್ತಿ : ಪ್ರಶ್ನೆಗೆ ಸರಿಯಾದಂತಹ ಉತ್ತರವೇ ಬಂದಿಲ್ಲ. ನೆಕ್ಸ್ಟ್ ಕೊಶ್ಚನ್ ಎಂದರೆ, ಪ್ರಶ್ನೋತ್ತರವನ್ನು ಏತಕ್ಕಾಗಿ ನಡೆಸುತ್ತೀರಿ? ಪ್ರಶ್ನೋತ್ತರವನ್ನು ನಡೆಸಿದ ಮೇಲೆ ಸಮಸ್ಯೆಯನ್ನು ಸರ್ಕಾರವು ಬಗೆಹರಿಸಬೇಕು.

ಅಧ್ಯಕ್ಷರು : ಅದಕ್ಕಾಗಿ ಸರ್ಕಾರದವರು 15 ದಿವಸಗಳ ಕಾಲಾವಕಾಶವನ್ನು ಕೇಳಿದ್ದಾರೆ. ಆ ಪ್ರಶ್ನೆಯು ಮುಗಿದ ಮೇಲೆ ಮುಂದಿನ ಪ್ರಶ್ನೆ ಶ್ರೀ ಖಾದ್ರಿಯವರದ್ದೇ ಇರುವುದು.

ಶಿಗ್ಗಾವ ತಾಲ್ಲೂಕಿನ ಹುಲಗೂರದಲ್ಲಿ 33 ಕೆ.ವಿ. ಸಬ್‌ಸ್ಟೇಷನ್ ಪ್ರಾರಂಭಿಸುವ ಬಗ್ಗೆ

359(3178) ಶ್ರೀ ಖಾದ್ರಿ ಎಸ್.ಎಸ್. (ಶಿಗ್ಗಾಂವ್) : ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಶಿಗ್ಗಾಂವ ತಾಲ್ಲೂಕು ಹುಲಗೂರದಲ್ಲಿ 33 ಕೆ.ವಿ. ಸಬ್-ಸ್ಟೇಷನ್ ನಿರ್ಮಾಣದ ವಿಷಯದಲ್ಲಿ ಸರ್ಕಾರ ಕೈಗೊಂಡ ಕ್ರಮಗಳೇನು;

ಆ) ಈ ಯೋಜನೆಗೆ ನಿಗಧಿಪಡಿಸಿದ ಹಣವೆಷ್ಟು;

ಇ) ಇದನ್ನು ಯಾವಾಗ ಪ್ರಾರಂಭಿಸಿ ಪೂರ್ಣಗೊಳಿಸಲಾಗುವುದು?

ಶ್ರೀ ಬಸವರಾಜ ಪಾಟೀಲ್ (ಇಂಧನ ರಾಜ್ಯ ಸಚಿವರು) :

ಅ) ಶಿಗ್ಗಾಂವ ತಾಲ್ಲೂಕು ಹುಲಗುಂದದಲ್ಲಿ 33 ಕೆ.ವಿ. ಸಬ್ ಸ್ಟೇಷನ್ ಸ್ಥಾಪಿಸಲು ಕ.ವಿ.ಪ್ರ.ನಿ.ನಿ.ಯ ತಾಂತ್ರಿಕ ಸಮಿತಿಯು ಅಕ್ಟೋಬರ್ 2001ರಲ್ಲಿ ಅನುಮೋದನೆ ನೀಡಿದೆ. ದಿನಾಂಕ: 1-6-2002ರಿಂದ ವಿದ್ಯುತ್ ಸರಬರಾಜು ಕಂಪನಿಗಳು ಕಾರ್ಯ ನಿರ್ವಹಿಸಲು ಪ್ರಾರಂಭವಾದ ನಂತರ ಸದರಿ ವಿದ್ಯುತ್ ಸಬ್ ಸ್ಟೇಷನ್‌ನ ನಿರ್ಮಾಣದ ಜವಾಬ್ದಾರಿಯನ್ನು ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪೆನಿಯು ವಹಿಸಿಕೊಂಡಿದೆ. ಈ ಉಪ ಕೇಂದ್ರಕ್ಕೆ ಬೇಕಾದ ಭೂಮಿಯನ್ನು ಖರೀದಿಸಲಾಗಿದ್ದು, ಭೂಮಿಯನ್ನು ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪೆನಿಯ ವಶಕ್ಕೆ ತೆಗೆದುಕೊಳ್ಳಲಾಗಿದೆ.

ಆ) ಈ ಯೋಜನೆಯನ್ನು ಇನ್ನೂ ಕೈಗೆತ್ತಿಕೊಳ್ಳಬೇಕಾಗಿರುವುದರಿಂದ, ಪ್ರಸಕ್ತ ವರ್ಷದ ಆಯವ್ಯಯದಲ್ಲಿ (2003-04) ಹಣವನ್ನು ನಿಗಧಿಪಡಿಸಿರುವುದಿಲ್ಲ.

ಇ) ಕರ್ನಾಟಕ ವಿದ್ಯುತ್ ಪ್ರಸರಣ ನಿಗಮದಿಂದ ನೇಮಕಗೊಂಡಿದ್ದ ಕನ್ಸಲ್ಟೆಂಟ್ ಆದ ಪಿ.ಆರ್.ಡಿ.ಸಿ. ಸಂಸ್ಥೆಯ ಅಧ್ಯಯನದ ವರದಿಯ ಪ್ರಕಾರ ಈ ಯೋಜನೆಯನ್ನು 2006-07ನೇ ಸಾಲಿನಲ್ಲಿ ಕೈಗೊಳ್ಳಬೇಕಾಗಿರುತ್ತದೆ. ಈಗಾಗಲೇ ಆಡಳಿತಾತ್ಮಕ ಮಂಜೂರಾತಿಯನ್ನು ಪಡೆದಿರುವ ಯೋಜನೆಗಳನ್ನು ಕೈಗೆತ್ತಿಕೊಂಡಿರುವುದರಿಂದ ಸದರಿ ಕಾಮಗಾರಿಯನ್ನು ಸದ್ಯಕ್ಕೆ ಕೈಗೊಳ್ಳುವ ಸಾಧ್ಯತೆ ಇರುವುದಿಲ್ಲ.